**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಜೇವರ್ಗಿ.</u>**

**<u>ಸಿ.ಸಿ.ನಂ.72/2020</u>**

ಪಿರ್ಯಾದಿದಾರರುಃ ಯಡ್ರಾಮಿ ಪೊಲೀಸ್ ಠಾಣೆ.

**ವಿರುದ್ಧ**

**ಆರೋಪಿತರುಃ**

ನಿಂಗಮ್ಮ ಗಂಡ ಗುರುಲಿಂಗಪ್ಪ ಮಾಲಿಪಾಟೀಲ
ವಃ 38 ವರ್ಷ, ಉಃ ವ್ಯಾಪಾರ,
ಸಾಃ ಆಲೂರ, ಹಾಃ ವಃ ಯಡ್ರಾಮಿ, ತಾಃ ಜೇವರ್ಗಿ.

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಪ್ರಕಾರ ಆರೋಪಿತರ ಹೇಳಿಕೆಗಳು</u>**

ಪ್ರಃ1: ಈ ಪ್ರಕರಣದಲ್ಲಿರುವ ಸಾಕ್ಷಿಗಳ ಸಾಕ್ಷ್ಯವನ್ನು ಕೇಳಿಸಿಕೊಂಡಿದ್ದಿರಾ ?

ಉಃ

ಪ್ರಃ2: ಚಾಸಾ-1 ಖಾಸಿಂ ಬೀ, ಪೊಲೀಸ ಪೇದೆ, ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ದಿನಾಂಕ 04-11-2019 ರಂದು ನನಗೂ, ಚಾಸಾ-4 ಮತ್ತು 5 ಅವರಿಗೆ ತಮ್ಮ ಪಿ ಎಸ್ ಐ ಸಾಹೇಬರು ಯಡ್ರಾಮಿಯಲ್ಲಿ ಬಜಾರನಲ್ಲಿ ಗುಸ್ತು ಕರ್ತವ್ಯಕ್ಕೆ ನೇಮಕ ಮಾಡಿದ್ದರು, ಆ ಪ್ರಕಾರ ತಾನು ಬಜಾರನಲ್ಲಿ ಗಸ್ತು ಕಾರ್ಯ ಮಾಡುತ್ತಿದ್ದು ಮದ್ಯಾಹ್ನ 01-00 ಗಂಟೆ ಸಮಯದಲ್ಲಿ ಸಿಂಡಿಕೇಟ ಬ್ಯಾಂಕ ಹತ್ತಿರ ನಿಂಗಮ್ಮ ಇವರು ಸೇಬು ಹಣ್ಣಿನ ತಳ್ಳುವ ಗಾಡಿಯನ್ನು ಟ್ರಾಫಿಕ ಜಾಮ ಆಗುವಂತೆ ರಸ್ತೆಯ ಮೇಲೆ ನಿಲ್ಲಿಸಿಕೊಂಡು ವ್ಯಾಪಾರ ಮಾಡುತ್ತಿದ್ದರು, ಆಗ ತಾನು ಗಾಡಿಯನ್ನು ರಸ್ತೆಯ ಬದಿಗೆ ಸರಿಸಲು ಹೇಳಿದಾಗ ಅವರು ನಾನು ನನ್ನ ಗಾಡಿಯನ್ನು ಸರಿಸಲ್ಲ ಬೇಕಾದರೆ ನೀವೆ ಸರಿಸಿ ಎಂದು ಆಗ ತಾನು ಗಾಡಿ

ತೆಗೆಯಲು ಹೋದಾಗ ಅವರು ತನಗೆ ಎ ರಂಡಿ ನಿನ್ನಾರು ಗಾಡಿಯನ್ನು ತೆಗೆಯಲು ಎಂದು ಅವಾಚ್ಯ ಶಬ್ದಗಳಿಂದ ಬೈದು ಕೈಯಿಂದ ತಳ್ಳಿದರು, ಮತ್ತು ತನಗೆ, ಚಾಸಾ-4 ಹಾಗೂ 5 ಅವರಿಗೆ ಆರೋಪಿತಳು ನನ್ನ ಗಂಡ ತಹಸಿಲ್ದಾರ ಕಚೇರಿಯಲ್ಲಿ ಕೆಲಸ ಮಾಡುತ್ತಾರೆ ನಿಮ್ಮ ಮೇಲೆ ಕೇಸ ಹಾಕಿಸುತ್ತೇನೆ ನನಗೆ ಪೋಲಿಸರು ಗೊತ್ತಿಲ್ಲವೇ ಎಂದು ಹೇಳಿದರು, ಸದರಿ ಜಗಳವನ್ನು ಚಾಸಾ-6 ರಿಂದ 9 ಅವರು ಬಿಡಿಸಿದರು, ನಂತರ ತಾನು ಪೊಲೀಸ ಕಚೇರಿಗೆ ಬಂದು ತಮ್ಮ ಪಿ ಎಸ್ ಐ ಸಾಹೇಬರಿಗೆ ತಿಳಿಸಿ ಸಾಯಂಕಾಲ 04-00 ಗಂಟೆಗೆ ದೂರ ದಾಖಲಿಸಿರುತ್ತೇನೆ, ಮಾರನೆ ದಿನ ಬೆಳಿಗ್ಗೆ 09-00 ಗಂಟೆಗೆ ಘಟನಾ ಸ್ಥಳದಲ್ಲಿ ಪಂಚನಾಮೆ ಜರುಗಿಸಲಾಯಿತು, ಆರೋಪಿಯ ಬಂಡಿಯನ್ನು ಜಪ್ತಿ ಪಡಿಸಿಕೊಳ್ಳಲಾಯಿತು, ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ3: ಚಾಸಾ-3 ಮಹಾಂತೇಶ, ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ತಾನು ಒಂದು ದಾಖಲೆಯನ್ನು ನೋಡುತ್ತಿದ್ದು ಅದರಲ್ಲಿ ತನ ಸಹಿ ಇರುತ್ತದೆ, ಸದರಿ ಸಹಿಯನ್ನು ಒಂದು ವರ್ಷದ ಹಿಂದೆ ಯಡ್ರಾಮಿಯ ಬಜಾರಿನಲ್ಲಿ ಮಾಡಿರುತ್ತೇನೆ ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ4: ಚಾಸಾ-3 ಮಡಿವಾಳ, ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ತಾನು ಒಂದು ದಾಖಲೆಯನ್ನು ನೋಡುತ್ತಿದ್ದು ಅದರಲ್ಲಿ ತನ ಸಹಿ ಇರುತ್ತದೆ,

ಸದರಿ ಸಹಿಯನ್ನು ಒಂದುವರೆ ವರ್ಷದ ಹಿಂದೆ ಯಡ್ರಾಮಿ ಬಸ್ಸ ನಿಲ್ದಾಣದಲ್ಲಿ ಮಾಡಿರುತ್ತೇನೆ ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ5: ಚಾಸಾ-5 ಅಣ್ಣಪ್ಪ, ಪೊಲೀಸ ಪೇದೆ, ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ದಿನಾಂಕ 04-11-2019 ರಂದು ಯಡ್ರಾಮಿ ಪಟ್ಟಣದಲ್ಲಿ ಸಂತೆ ನಡೆಯುತ್ತಿದ್ದರಿಂದ ನನಗೂ, ಚಾಸಾ-1 ಮತ್ತು 5 ಅವರಿಗೆ ಗುಸ್ತು ಕರ್ತವ್ಯಕ್ಕೆ ನೇಮಕ ಮಾಡಿದ್ದರು, ಆ ಪ್ರಕಾರ ತಾನು ಬಜಾರನಲ್ಲಿ ಗಸ್ತು ಕಾರ್ಯ ಮಾಡುತ್ತಿದ್ದು ಮದ್ಯಾಹ್ನ 01-00 ಗಂಟೆ ಸಮಯದಲ್ಲಿ ಸಿಂಡಿಕೇಟ ಬ್ಯಾಂಕ ಹತ್ತಿರ ನಿಂಗಮ್ಮ ಇವರು ಸೇಬು ಹಣ್ಣಿನ ತಳ್ಳುವ ಗಾಡಿಯನ್ನು ಟ್ರಾಫಿಕ ಜಾಮ ಆಗುವಂತೆ ರಸ್ತೆಯ ಮೇಲೆ ನಿಲ್ಲಿಸಿಕೊಂಡು ವ್ಯಾಪಾರ ಮಾಡುತ್ತಿದ್ದರು, ಆಗ ತಾನು ಮತ್ತು ತಮ್ಮ ಸಿಬ್ಬಂದಿ ಹೋಗಿ ಅವರಿಗೆ ಗಾಡಿಯನ್ನು ರಸ್ತೆಯ ಬದಿಗೆ ಸರಿಸಲು ಹೇಳಿದಾಗ ಅವರು ನಾನು ನನ್ನ ಗಾಡಿಯನ್ನು ತೆಗೆಯಾಲ್ಲ ಬೇಕಾದರೆ ಬಂಡಿಯನ್ನು ಠಾಣೆಗೆ ನೀವೆ ತೆಗೆದುಕೊಂಡು ಹೋಗಿ ಎಂದು ಏರು ಧ್ವನಿಯಲ್ಲಿ ಮಾತನಾಡಿದರು, ಆದ್ದರಿಂದ ಚಾಸಾ-1 ಅವರು ಕರ್ತವ್ಯಕ್ಕೆ ಅಡ್ಡಿಪಡಿಸಬೇಡ ಎಂದು ಎಂದು ಹೇಳಿ ಗಾಡಿ ತೆಗೆಯಲು ಹೋದಾಗ ಅವರು ತನಗೆ ಎ ರಂಡಿ ನಿನ್ಯಾರು ಗಾಡಿಯನ್ನು ತೆಗೆಯಲು ಎಂದು ಅವಾಚ್ಯ ಶಬ್ದಗಳಿಂದ ಬೈದು ಕೈಯಿಂದ ತಳ್ಳಿದರು, ಮತ್ತು ಆರೋಪಿತಳು ನನ್ನ ಗಂಡ ತಹಸಿಲ್ದಾರ ಕಚೇರಿಯಲ್ಲಿ ಕೆಲಸ ಮಾಡುತ್ತಾರೆ ನಿಮ್ಮ ಮೇಲೆ ಕೇಸ ಹಾಕಿಸುತ್ತೇನೆ ಎಂದು ಹೇಳಿದರು, ಸದರಿ ಜಗಳವನ್ನು ಚಾಸಾ-6 ರಿಂದ 8 ಅವರು ಬಿಡಿಸಿದರು, ಆ ಬಗ್ಗೆ

ತನಿಖಾಧಿಕಾರಿ ಮುಂದು ಹೇಳಿಕೆ ನೀಡಿರುತ್ತೇನೆ ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ6: ಈ ಕೇಸಿನ ಬಗ್ಗೆ ನಿಮಗೆ ಏನಾದರೂ ಹೇಳುವುದು ಇದೆಯೇ?

ಉಃ

ಪ್ರ-7 ಈ ಕೇಸಿನ ಬಗ್ಗೆ ನಿಮ್ಮ ಪರವಾಗಿ ಸಾಕ್ಷಿ ಮಾಡಿಸಲು ಇಚ್ಚಿಸುವಿರಾ?

ಉಃ

(ಆರೋಪಿತನ/ರ ಹೇಳಿಕೆಯನ್ನು ಆರೋಪಿತರಿಗೆ/ನಿಗೆ ತಿಳಿಯುವ ಭಾಷೆಯಲ್ಲಿ ಹೇಳಿ ಅವರಿಂದ/ನಿಂದ ಬಂದ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು)

ದಿಃ 23-01-2026 ಸಿವಿಲ್ ಹಾಗೂ ಪ್ರ ದ ನ್ಯಾ , ದಂಡಾಧಿಕಾರಿಗಳು,

ಜೇವರ್ಗಿ.